


International Journal of Kannada Research
www.kannadajournal.com

ISSN: 2454–5813
IJKR 2022; 8(2): 31-34
© 2022 IJKR
www.kannadajournal.com
Received: 19-02-2022
Accepted: 21-03-2022

**ಡಾ.ಸುರೇಶ.ಕೆ.ಸಿ**
ಕನ್ನಡ ಸಹ ಪ್ರಾಧ್ಯಾಪಕರು
ಕೆ.ಎಲ್.ಇ ಸಂಸ್ಥೆಯ
ಎಸ್. ನಿಜಲಿಂಗಪ್ಪ ಕಾಲೇಜು
ರಾಜಾಜಿನಗರ, ಬೆಂಗಳೂರು

**Corresponding Author:**
**ಡಾ.ಸುರೇಶ.ಕೆ.ಸಿ**
ಕನ್ನಡ ಸಹ ಪ್ರಾಧ್ಯಾಪಕರು
ಕೆ.ಎಲ್.ಇ ಸಂಸ್ಥೆಯ
ಎಸ್. ನಿಜಲಿಂಗಪ್ಪ ಕಾಲೇಜು
ರಾಜಾಜಿನಗರ, ಬೆಂಗಳೂರು

# ಆಧುನಿಕತೆ ಮತ್ತು ಕೃಷಿ

**ಡಾ.ಸುರೇಶ.ಕೆ.ಸಿ**

ಸಾಮಾನ್ಯವಾಗಿ ಕೈಗಾರಿಕಾ ಕ್ರಾಂತಿಯ ನಂತರದ ದಿನಗಳನ್ನು ನಾವು ಆಧುನಿಕತೆಯ ಕಾಲ ಘಟ್ಟವಾಗಿ ಗುರುತಿಸುತ್ತೇವೆ. ಇದರ ಪರಿಣಾಮದಿಂದಾಗಿ ತಂತ್ರಜ್ಞಾನದ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಕಷ್ಟು ಬದಲಾವಣೆ ತಂದಿರುವಂತೆ, ಕೃಷಿ ಕ್ಷೇತ್ರದಲ್ಲೂ ಬದಲಾವಣೆ ತಂದಿದೆ. ಈ ಬದಲಾವಣೆಯಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕ ಪರಿಣಾಮಗಳುಂಟಾಗಿವೆ.
ಬಹು ಸುದೀರ್ಘ ಪರಂಪರೆಯನ್ನು ಹೊಂದಿರುವ ಕೃಷಿ, ದೇಶದ ಎಲ್ಲಾ ವರ್ಗದ ಜನರಿಗೆ ಅನ್ನವನ್ನು ಒದಗಿಸುತ್ತಾ ಬಂದಿರುವ ಖ್ಯಾತಿ ಇದಕ್ಕಿದೆ. ಆದರೆ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಸ್ವತ್ರಂತ್ಯೋತ್ತರ ದಿನಗಳಲ್ಲಿ ಆಹಾರದ ಅಭಾವದಿಂದಾಗಿ ಆಹಾರ ಪೂರೈಸುವುದು ಒಂದು ಸಮಸ್ಯೆಯಾಗಿ ಪರಿಣಮಿಸಿತು. ಇದಕ್ಕಾಗಿ ಪಂಚವಾರ್ಷಿಕ ಯೋಜನೆಗಳ ಮೂಲಕ ಹೆಚ್ಚು ಗಮನ ನೀಡಲಾಯಿತು. ೧೯ನೇ ಶತಮಾನದಲ್ಲಿ ಕೃಷಿಯಲ್ಲಿ ಹಲವು ಹೊಸ ಆವಿಷ್ಕಾರಗಳಾದವು. ಅಧಿಕ ಉತ್ಪಾದನೆಯ ಹಂಬಲದಿಂದ ಬೆಳೆಗಳಿಗೆ ರಾಸಾಯನಿಕ ಗೊಬ್ಬರಗಳನ್ನು ಬಳಸುವುದು ಮತ್ತು ಕ್ರಿಮಿನಾಶಕಗಳನ್ನು ಬಳಸುವುದು ಹೆಚ್ಚಾಯಿತು. ಇದರಿಂದಾಗಿ ಕೃಷಿಯಲ್ಲಿ ೧೯೬೦ರ ದಶಕದಲ್ಲಿ ಹಸಿರು ಕ್ರಾಂತಿಯನ್ನು ಸಾಧಿಸಲಾಯಿತು. ವೈಜ್ಞಾನಿಕ ಕೃಷಿಯಿಂದ ಆಹಾರೋತ್ಪಾದನೆ ಮಟ್ಟವೇನೋ ಹೆಚ್ಚಿಸಲಾಯಿತು ನಿಜ. ಆದರೆ ಆ ನಂತರದದಲ್ಲಿ ಅದರಿಂದ ಅನೇಕ ಅನಾನುಕೂಲಗಳನ್ನು ಎದುರಿಸಬೇಕಾಯಿತು. ಅಲ್ಲದೆ ಇಂದಿಗೂ ಆಧುನಿಕ ಕೃಷಿ ಪದ್ದತಿಯನ್ನು ಹಚ್ಚಾಗಿ ಅನುಸರಿತ್ತಿರುವುದರಿಂದ ಅನೇಕ ಬಗೆಯ ತೊಂದರೆಗಳನ್ನು ಎದುರಿಸಬೇಕಾಗಿದೆ. ಆಧುನಿಕತೆಯಿಂದಾಗಿ ಕೃಷಿಯಲ್ಲಿ ಅನೇಕ ರೀತಿಯ ಬದಲಾವಣೆಗಳು ಉಂಟಾದವು.

### ಕೃಷಿಯನ್ನು ಅವಲಂಭಿತರಾದ ರೈತರು ಮತ್ತು ದುಡಿಮೆಗಾರರ ಮೇಲಾದ ಪರಿಣಾಮಗಳು

**೧. ಉದ್ಯೋಗಾವಕಾಶ ಕಡಿತ:** ದೇಶದ ಜನಸಂಖ್ಯೆಗೆ ಬೇಕಾಗುವ ಆಹಾರೋತ್ಪನ್ನ ಹೆಚ್ಚಿಸುವ ಮತ್ತು ಉತ್ಪಾದನಾ ವೆಚ್ಚವನ್ನು ತಗ್ಗಿಸುವ ಉದ್ದೇಶದಿಂದ ಭೂಮಿಯನ್ನು ಉಳುಮೆಯಿಂದ ಹಿಡಿದು, ವ್ಯವಸಾಯೋತ್ಪನ್ನಗಳ ಸಾಗಾಣಿಕೆಯವರೆಗೂ ಎಲ್ಲ ಹಂತಗಳಲ್ಲೂ ಯಂತ್ರಗಳ ಬಳಕೆ ಮಾಡಿರುವುದರಿಂದ ದುಡಿಯುವ ವರ್ಗದವರ ಎಲ್ಲ ಕೆಲಸಗಳನ್ನ ಕಬಳಿಸುತ್ತಿರುವ ಹಿನ್ನಲೆಯಲ್ಲಿ ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ. ಹತ್ತಾರು ಜನರು ಕೂಡಿ ಹೆಚ್ಚು ಕಾಲಾವಧಿಯಲ್ಲಿ ಮಾಡುವ ಕೆಲಸವನ್ನು ಯಂತ್ರವೊಂದು ಕೆಲವೇ ಗಂಟೆ ಅಥವಾ ಒಂದೇ ದಿನದಲ್ಲಿ ಮಾಡಿ ಮುಗಿಸುವುದರಿಂದ ಕೆಲಸ ವೇಗವಾಗಿ ಆಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಕೃಷಿಯನ್ನೇ ಅವಲಂಬಿಸಿದ ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲದಾಗ ಹೆಚ್ಚೆಚ್ಚು ನಿರುದ್ಯೋಗ ಸಮಸ್ಯೆ ಸೃಷ್ಟಿಯಾಗುತ್ತಿದೆ.
ಅಲ್ಲದೆ ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದಾಗಿ ಕೃಷಿ ಅವಲಂಬಿತ ಇತರರ ಪಾರಂಪರಿಕ ಕುಲ ಕಸುಬುಗಳಾದ ಬಡಿಗ, ಕಮ್ಮಾರ, ಚಮ್ಮಾರ ಮುಂತಾದ ವೃತ್ತಿಗಳು ಮೂಲೆಗುಂಪಾಗುತ್ತಿವೆ. ಕೃಷಿ ವಲಯದಲ್ಲಿ ಇವರಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ಇವರಿಗೆ ಉದ್ಯೋಗ ಇಲ್ಲದಂತಾಗಿದೆ.

**೨. ಬಿತ್ತನೆ ಬೀಜಗಳ ಮೇಲೆ ಹಿಡಿತ ಇಲ್ಲದಂತಾಗುತ್ತದೆ:** ಆಧುನೀಕರಣಗೊಳ್ಳುತ್ತಿರುವ ಕೃಷಿಯಲ್ಲಿ ರೈತರಿಗೆ ತಾವು ಯಾವ ಬೀಜ ಬಿತ್ತಿ ಬೆಳೆಯಬೇಕೆಂಬ ನಿರ್ಧಾರಕೂಡ ಅವರದಾಗಿರುವುದಿಲ್ಲ. ಏಕೆಂದರೆ ಬಹುಪಾಲು ರೈತರು ಅಧಿಕ ಇಳುವರಿ ಮತ್ತು ತಮ್ಮ ಲಾಭದ ಉದ್ದೇಶದಿಂದ ವಾಣಿಜ್ಯ ಬೆಳೆಗಳನ್ನು ಬೆಳೆಯುವರು. ಮಾರುಕಟ್ಟೆಯಲ್ಲಿ ಸಿದ್ಧಾರೂಪದಲ್ಲಿ ದೊರೆಯುವ ಬಹುರಾಷ್ಟ್ರೀಯ ಕಂಪನಿಗಳಿಂದ ತಯಾರಿಸಲ್ಪಟ್ಟ ಬೀಜಗಳನ್ನು ಉಪಯೋಗಿಸುವುದರಿಂದ ಬೀಜಕ್ಕಾಗಿ ಕೃಷಿಕರು ಇಂದು

ಪರಾವಲಂಬಿಯಾಗುತ್ತಿದ್ದಾರೆ. ಕ್ರಮೇಣ ಮಾರುಕಟ್ಟೆಯಲ್ಲಿ ಯಾವ ಬೀಜ ಲಭ್ಯವಿದೆ ಮತ್ತು ಯಾವಾಗ ಬೀಜಗಳು ಸಿಗುತ್ತವೆ ಎನ್ನುವುದರ ಮೇಲೆ ಅವರ ಬಿತ್ತನೆ ಕಾರ್ಯ ನಡೆಯುತ್ತದೆ. ಅಂದರೆ ಬಿತ್ತನೆ ಬೀಜಗಳ ಮೇಲೆ ಕೃಷಿಕರಿಗಿದ್ದ ಹತೋಟಿ ಇಂದು ಕೈತಪ್ಪಿ ಹೋಗುತ್ತಿದೆ.

**೩. ದುಬಾರಿ ಆಧುನಿಕ ಕೃಷಿ ವಿಧಾನದಿಂದ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ:** ಕೃಷಿ ಉತ್ಪಾದನೆಯಲ್ಲಿ ದೇಶ ಸ್ವಾವಲಂಬಿಯಾಗಿದ್ದರೂ ಆಧುನಿಕ ಕೃಷಿಯ ದೆಸೆಯಿಂದ ಹತ್ತುಹಲವು ಸಾಲ ಸೋಲಗಳಲ್ಲಿ ಮುಳುಗಿದ ರೈತನ ಪಾಡು ಚಿಂತಾ ಜನಕವಾಗಿದೆ. ಸಾಮಾನ್ಯವಾಗಿ ಬಡವರು ಮತ್ತು ಮಧ್ಯಮ ವರ್ಗದವರು ಕೃಷಿಯನ್ನು ಹೆಚ್ಚಾಗಿ ಅವಲಂಬಿಸಿದವರಾಗಿದ್ದು, ಆರ್ಥಿಕವಾಗಿ ಇವರು ಅಷ್ಟೊಂದು ಸ್ಥಿತಿವಂತರಾಗಿರುವುದಿಲ್ಲ. ಹಾಗಾಗಿ ಬಿತ್ತನೆಯ ಸಂದರ್ಭದಲ್ಲಿ ದುಬಾರಿ ಬೀಜ ಗೊಬ್ಬರಗಳನ್ನು ಕೊಳ್ಳಲು ಕೃಷಿ ಸಾಲದ ಮೊರೆ ಹೋಗಿತ್ತಾರೆ.
ಹೀಗೆ ರೈತರು ತಾವು ಬಿತ್ತಬೇಕೆಂದಿರುವ ಬೀಜಗಳನ್ನು ಖಾಸಗಿ ಅಂಗಡಿಗಳಿಂದ ಕೊಂಡುತರುವಾಗ ಬೀಜವು ಬಿತ್ತನೆಗೆ ಯೋಗ್ಯವೇ? ಅದುರೋಗ ಮುಕ್ತವೇ? ಎಂಬುದನ್ನು ಪರೀಕ್ಷಿಸುವುದಿಲ್ಲ. ಬಿತ್ತನೆಯ ಹಿಂದಿನ ದಿನ ಅಥವಾ ಬಿತ್ತನೆಯ ದಿನವೇ ಬಿತ್ತುವ ಬೀಜಕ್ಕಾಗಿ ಹುಡುಕಾಡುತ್ತಾರೆ. ಹೀಗೆ ತಂದ ಬಿತ್ತನೆಯ ಬೀಜಗಳು ದೋಷಯುಕ್ತವಾಗಿದ್ದಾವೋ ಇಲ್ಲವೋ ಎಂಬುದನ್ನು ಗಮನಿಸುವುದಿಲ್ಲ. ಮಳೆಯ ಅಸಮರ್ಪಕತೆಯಿಂದಾಗಿ ಬೆಳೆದ ಬೆಳೆಯು ಕೈಕೊಟ್ಟರೆ ತನ್ನ ಬೆಳೆಯನ್ನೇ ನಂಬಿ ಸಾಲ ಮಾಡಿದ ರೈತರಿಗೆ ಸಾಲವನ್ನು ತೀರಿಸಲಾಗದೆ ಎಷ್ಟೋ ರೈತರು ಸಾವಿಗೆ ಶರಣಾಗುತ್ತಿರುವುದು ನಮ್ಮ ಕಣ್ಣ ಮುಂದೆಯೇ ಇದೆ. ಆತ್ಮಹತ್ಯೆ ಮಾಡಿಕೊಂಡ ಕೃಷಿಕನ ಕುಟುಂಬ ಹಲವು ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಸತ್ತ ವ್ಯಕ್ತಿ ಮಾಡಿದ ಸಾಲಕ್ಕಾಗಿ ತಮ್ಮಲ್ಲಿದ್ದ ಅಲ್ಪಸ್ವಲ್ಪ ಭೂಮಿಯನ್ನು ಮಾರುವುದರಿಂದ ಜೀವನಾಧಾರಕ್ಕಿದ್ದ ಭೂಮಿ ಕಳೆದುಕೊಂಡು ಬೀದಿಗೆ ಬೀಳುವ ಸಂಭವ ಬರುತ್ತದೆ.

**೪. ಆಹಾರ ಬೆಳೆಗಳಿಗಿಂತ ವಾಣಿಜ್ಯ ಬೆಳೆಗಳಿಗೆ ಪ್ರಾಮುಖ್ಯತೆ ಹೆಚ್ಚಾಗುತ್ತಿದೆ:** ಹಿಂದೆ ರೈತರ ಮನೆಯಲ್ಲಿ ಎಲ್ಲಿ ನೋಡಿದರೂ ಅಲ್ಲಿ ಧಾನ್ಯದ ಚೀಲಗಳು ತುಂಬಿದಂತೆ ಕಾಣುತ್ತಿದ್ದವು. ಆದರೆ ಇಂದು ಸಾಮಾನ್ಯವಾಗಿ ಆಹಾರ ಬೆಳೆಗಳ ಸಂಗ್ರಹ ರೈತರಲ್ಲಿ ಅಷ್ಟಾಗಿ ಕಂಡು ಬರುತ್ತಿಲ್ಲ. ಏಕೆಂದರೆ ಇಂದು ಕೃಷಿಯನ್ನು ಲಾಭದ ದೃಷ್ಟಿಯಿಂದ ನೋಡಲಾಗುತ್ತಿದೆ. ಆದ್ದರಿಂದ ಆಹಾರ ಧಾನ್ಯಗಳ ಬದಲಿಗೆ ಬಹು ರಾಷ್ಟ್ರೀಯ ಬೆಳೆಗಳನ್ನು ಬೆಳೆದಾಗ ಮನೆಗೆ ಬೇಕಾದ ವರ್ಷವಿಡಿ ಸಾಕಾಗುವಷ್ಟು ಧಾನ್ಯಗಳನ್ನು ಸಂಗ್ರಹ ಮಾಡುತ್ತಿದ್ದರು. ಈಗ ಈ ಪರಿಸ್ಥಿತಿ ಇಲ್ಲವಾಗಿದೆ.

**೫. ಆಧುನಿಕ ಕೃಷಿ ವಿಧಾನದಿಂದ ಮಣ್ಣಿನ ಫಲವತ್ತತೆ ಕಡಿಮೆ:** ಆಧುನಿಕ ಕೃಷಿಯಲ್ಲಿ ವಿವಿಧ ರೀತಿಯ ಹೊಸ ಹೊಸ ತಳಿ ಬಂದಿವೆಯಾದರೂ ಅದೇ ರೀತಿ ವಿವಿಧ ರೀತಿಯ ರೋಗಗಳು ಹುಟ್ಟಿಕೊಂಡಿವೆ. ಹೊಸ ಕೀಟನಾಶಕ ಬಳಸಿದರೂ ಮತ್ತೆ ಮತ್ತೆ ಹೊಸ ಹೊಸ ಕೀಟಗಳು ಹುಟ್ಟಿಕೊಳ್ಳುತ್ತಿವೆ. ಹೀಗೆ ನಾವು ಕೃಷಿಗಾಗಿ ಬಳಸುವ ಕೀಟನಾಶಕಗಳಿಂದ ವಾರ್ಷಿಕವಾಗಿ ಎಷ್ಟು ವಿಷ ಸೇವನೆ ಮಾಡುತ್ತಿದ್ದೇವೆ ಎಂದರೆ ಭಾರತದ ವಾರ್ಷಿಕ ಉತ್ಪಾದನೆಯ ಶೇ೭೦ರಷ್ಟು ವಿಷ ವಸ್ತುಗಳು ಬರಿ ಕೃಷಿಗಾಗಿ ಬಳಕೆ ಮಾಡುತ್ತಿದ್ದೇವೆ. (ನರೇಂದ್ರ ರೈ ೧೯೯೭, ಪುಟ ೧೪) ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಲಾಭದ ಉದ್ದೇಶದಿಂದ ವಿವಿಧ ನಮೂನೆಯ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ತಯಾರಿಸುತ್ತಿವೆ. ಕೃಷಿಕರು ಅಧಿಕ ಇಳುವರಿಯನ್ನು ಪಡೆಯಬಹುದು ಎಂದು ಇವನ್ನು ಬಳಸುತ್ತಿದ್ದಾರೆ. ಇದರಿಂದ ಮಣ್ಣಿನಲ್ಲಿರುವ ಎರೆಹುಳು ಮೊದಲಾದ ಸೂಕ್ಷ್ಮ ಜೀವಿಗಳು ನಾಶಹೊಂದಿ, ಕ್ರಮೇಣ ಭೂಮಿ ತನ್ನ ಫಲವತ್ತತೆಯನ್ನು ಕಳೆದುಕೊಂಡು ಭೂಮಿ ಬಂಜರಾಗುತ್ತವೆ.

**೬. ಅರಣ್ಯ ಮತ್ತು ಜೀವ ವೈವಿಧ್ಯತೆಯ ನಾಶ:** ಹೆಚ್ಚು ಉತ್ಪಾದನೆಯ ಆಲೋಚನೆಯಿಂದ ಅರಣ್ಯವನ್ನು ನಾಶಮಾಡಿ ಕೃಷಿ ಭೂಮಿಯನ್ನಾಗಿ ಪರಿವರ್ತಿಸಲಾಗುತ್ತದೆ. ಇದರಿಂದ ಅರಣ್ಯನಾಶ ಹೊಂದಿ, ಪ್ರಕೃತಿ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ವಿಫಲವಾಗಿ ಸಕಾಲದಲ್ಲಿ ಮಳೆಯಾಗದೆ ಇರುವುದನ್ನು ಗಮನಿಸಬಹುದು. ಅಷ್ಟೇ ಅಲ್ಲದೆ ಜಲ ಮೂಲಗಳು ಬತ್ತುತಿವೆ. ಜೊತೆಗೆ ಜೀವ ವೈವಿಧ್ಯವೂ ನಾಶಗೊಳ್ಳುತ್ತಿವೆ.

**೭. ಅಭಿವೃದ್ಧಿಯ ಹೆಸರಿನಲ್ಲಿ ಕೃಷಿಕರನ್ನು ಭೂ ಹೀನರನ್ನಾಗಿ ಮಾಡಲಾಗುತ್ತದೆ:** ಸರ್ಕಾರ ಇಂದು ಕಾರ್ಖಾನೆಗಳಿಗೆ ರೈತರ ಭೂಮಿಯನ್ನು ಕಬಳಿಸುತ್ತಿದೆ. ಬಹು ರಾಷ್ಟ್ರೀಯ ಕಂಪನಿಗಳ ಬಂಡವಾಳವನ್ನ ಆಕರ್ಷಿಸಲು ಎಂದೋ ಕೈಗೊಳ್ಳುವ ಕಾಮಗಾರಿಗೆ ಸರ್ಕಾರಭೂಮಿಗೆ ಮೌಲ್ಯ ಮಾಡಿದ ಹಣಕೊಟ್ಟರೂ ರೈತರಿಗೆ ಇದ್ದ ಭೂಮಿ ಕಳೆದುಕೊಂಡು, ಭೂಮಿಯನ್ನೇ ಅವಲಂಬಿಸಿದ, ದುಡಿಯುತ್ತಿದ್ದ ಜನರಿಗೆ ಕೆಲಸವಿಲ್ಲದಂತಾಗಿದೆ. ಇದರಿಂದ ಕೃಷಿಕರು ಬೀದಿ ಪಾಲಾಗುತ್ತ ಇದ್ದಾರೆ. ಕೃಷಿ ಕೆಲಸದಲ್ಲಿ ಅಭ್ಯಾಸವಿದ್ದ ಇವರಿಗೆ ಅಭ್ಯಾಸವಿಲ್ಲದ ಬೇರೆ ಬೇರೆ ಉದ್ಯೋಗ ಆರಿಸಿಕೊಂಡರೂ, ಹೊಂದಾಣಿಕೆ ಕಷ್ಟವಾಗುತ್ತಿದೆ.
ಈ ಗ್ರಾಮೀಣ ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕಿಂತ ಮುಖ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳನ್ನು ಓಲೈಸುವುದರಲ್ಲಿ ಸರ್ಕಾರ ಮುಂದಾಗಿರುವುದು ಶೋಚನೀಯ.
ಪಾರಂಪರಿಕ ಕೃಷಿಯ ಪರಿಣಾಮದಿಂದ ಆಹಾರ ಉತ್ಪಾದನೆಯ ಕ್ರಮದಲ್ಲಿ ಬದಲಾವಣೆಗೊಳ್ಳುತ್ತಿರುವುದರಿಂದ ಸಹಜವಾಗಿ ಉತ್ಪದನಾ ಪರಿಸರ ಮತ್ತು ಪ್ರಕ್ರಿಯೆಯೊಂದಿಗೆ ನೇರ ನಿಕಟ ಸಂಬಂಧ ದೂರವಾಗುತ್ತಿದೆ. ಇದರಿಂದ ಪಾರಂಪರಾಗತ ಜೀವನ ವಿಧಾನಕ್ಕಿಂತ ಭಿನ್ನವಾದ ಸಮಕಾಲೀನ ಜೀವನ ವಿಧಾನ ರೂಪಗೊಳ್ಳುತ್ತಿವೆ. ಹೀಗೆ ರೂಪಗೊಳ್ಳುತ್ತಿರುವ ಕೃಷಿಯ ಇವತ್ತಿನ ಸಾಂಸ್ಕೃತಿಕ ಸ್ವರೂಪ ಈ ಕೆಳಗಿನಂತಿವೆ.

**೧.ಆರ್ಥಿಕ ಬದುಕು ಬದಲಾದಂತೆ ಕೃಷಿಕರ ಸಾಂಸ್ಕೃತಿಕ ಅಭಿವ್ಯಕ್ತಿ ಮತ್ತು ಅಭಿರುಚಿಗಳಲ್ಲಿ ಬದಲಾವಣೆಗೆಗಳಾಗುತ್ತವೆ:** ಕಳೆ ತೆಗೆಯುವ, ಬೆಳೆಕೊಯ್ಯುವ, ಹಂತಿಕಟ್ಟುವ ಇನ್ನು ಹಲವಾರು ಕೃಷಿ ಕೆಲಸಗಳನ್ನು ಯಂತ್ರಗಳಿಂದ ಮಾಡಲ್ಪಡುವುದರಿಂದ, ಕೃಷಿ ಚಟುವಟಿಕೆಗಳು ನಡೆಯುವಾಗ ಜರುಗುತ್ತಿದ್ದ ಜನಪದರ ಪ್ರಕ್ರಿಯೆಗಳು ಇಂದು ಕಾಣಸಿಗುತ್ತಿಲ್ಲ. ಅಂದರೆ ಕೆಲಸ ಮಾಡುವಾಗ ಕೃಷಿಕರು ತಮ್ಮ ದುಡಿಮೆಯ ದಣಿವು ಮರೆಯುವುದಕ್ಕಾಗಿ ಜನಪದ ಹಾಡು, ಹಂತಿಪದ, ಸವಾಲ್ ಜವಾಲ್, ಲಾವಣಿ ಸಾಹಿತ್ಯವನ್ನು ಹಾಡುತ್ತಿದ್ದರು. ಅವು ಇಂದು ಹೊಲಗದ್ದೆಗಳಲ್ಲಿ ಕಾಣಸಿಗದು.
ರೈತರಿಗೆ ಇಂದು ಕಡಿಮೆ ಶ್ರಮ, ಹೆಚ್ಚು ಕೆಲಸದ ನಿರೀಕ್ಷೆ ಮತ್ತು ಅಪೇಕ್ಷೆ ಇರುವುದರಿಂದ ಹಾಡನ್ನು ಹಾಡಲು ಸಮಯವಿಲ್ಲವಾಗಿದೆ. ಬದಲಾಗಿ ರೇಡಿಯೋ ಸಿನಿಮಾ ಗೀತೆ ಇಲ್ಲವೇ ಸಿನಿಮಾ ಹಾಡು ಗುನುಗುವ ಪ್ರವೃತ್ತಿ ಇದೆ. ಹೀಗೆ ಸಾಂಸ್ಕೃತಿಕ ಅಭಿರುಚಿ ಬದಲಾಗುತ್ತಿದೆ.

**೨. ಬಿತ್ತನೆ ಬೀಜಗಳಿಗಾಗಿ ಪರಾವಲಂಬನೆಯ ಸ್ಥಿತಿ ನಿರ್ಮಾಣ:** ಇಂದು ಮಾರುಕಟ್ಟೆಯಲ್ಲಿ ದೊರೆಯುವ ಸಿದ್ದ ಬೀಜ ತಂದು ಬಿತ್ತುವ ಕ್ರಮವಿದೆ. ಹಿಂದಿನಂತೆ ಬೀಜ ಸಂರಕ್ಷಿಸುವ ಪ್ರವೃತ್ತಿ ಕಂಡುಬರುತ್ತಿಲ್ಲ. ಅಲ್ಲದೆ ವಿದೇಶಿ ಖಾಸಗಿ ಕಂಪನಿಗಳ ಬಿ.ಟಿ.ಯಂತಕುಲಾಂತರಿ ತಳಿಗಳ ಬಳಕೆಯಿಂದ ಕ್ರಮೇಣ ಬೀಜದ ಮೇಲಿನ ಹಕ್ಕನ್ನು ನಮ್ಮ ರೈತರು ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ, ಜೊತೆಗೆ ಕೃಷಿ ನೀತಿಯೂ ಕೂಡ ದ್ವಂದ್ವದಿಂದ ಇರುವುದನ್ನು ಗಮನಿಸಬಹುದು. "ರಾಷ್ಟ್ರೀಯಜೀವ ವೈವಿಧ್ಯಕಾಯಿದೆ"ಯಿಂದ ೧೯೦ ಬೆಳೆಗಳನ್ನು ಹೊರಗಿಟ್ಟು ಹೊರಡಿಸಿರುವ ಅಧಿಸೂಚನೆ ಮುಂದೊಂದು ದಿನ ನಮ್ಮ ಕೃಷಿಕ, ಬಹುರಾಷ್ಟ್ರೀಯ ಕಂಪನಿಗಳಿಗ ಬೀಜಕ್ಕಾಗಿ ಕೈಯೊಡ್ಡುವ ಪರಿಸ್ಥಿತಿ ಬಂದು ಹೋಗಬಹುದು. ಇದರಿಂದ ದೇಶಿ ಬೀಜ ತಳಿಗಳನ್ನು ಕಳೆದುಕೊಳ್ಳುವ ಭೀತಿ ಅಥವಾ ಸ್ಥಿತಿ ತಲುಪಬಹುದು. ಕಾಲಾನಂತರದಲ್ಲಿ ಬೀಜ ಸಂರಕ್ಷಿಸುವ ದೇಶೀಯ ಜ್ಞಾನ ಮತ್ತು ಕೌಶಲ್ಯಕೂಡ ಜನಮಾನಸದಿಂದ ಮರೆಯಾಗುವ ಸಾಧ್ಯತೆ ಇದೆ.

ಮಾರುಕಟ್ಟೆಯಿಂದ ತರುವ ಬೀಜಗಳಿಂದ ಬೆಳೆದ ಬೀಜರಹಿತ (ಸೀಡ್ಲೆಸ್) ಬೆಳೆಗಳಾಗಿರುವುದರಿಂದ ಇಲ್ಲವೇ ಬೆಳೆದ ಬೀಜ ಮತ್ತೆ ಬಿತ್ತನೆಮಾಡಲು ಯೋಗ್ಯವಾಗಿರುವುದಿಲ್ಲ. ಹಾಗಾಗಿ ಮುಂದೊಂದು ದಿನ ಬಿತ್ತನೆಯ ಬೀಜಗಳಿಗಾಗಿ ರೈತರು ಬಹುರಾಷ್ಟ್ರೀಯ ಕಂಪನಿಗಳ ದಾಸರಾಗಬಹುದು.

**೩. ಪೂರ್ವಿಕರ ಕೃಷಿ ಜ್ಞಾನ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದೆ:** ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವ ರೈತರು ಅಧಿಕ ಇಳುವರಿ ಪಡೆಯುವುದಕ್ಕಾಗಿ ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರ, ಬೆಳೆಗಳ ರೋಗತಡೆಗಾಗಿ ಅಪಾಯಕಾರಿಯಾದ ಕೀಟನಾಶಕ ಬಳಸುತ್ತಿದ್ದಾರೆ. ಹಿಂದೆ ನಮ್ಮ ಪೂರ್ವಿಕರು ಬಳಸುತ್ತಿದ್ದ ದೇಶೀ ಜ್ಞಾನ ಮರೆಯಾಗುತ್ತಿದೆ. ಜೊತೆಗೆ 'ಹಿತ್ತಲಗಿಡ ಮದ್ದಲ್ಲ'ಎನ್ನುವಂತೆ ಪೂರ್ವಿಕರ ಕೃಷಿಜ್ಞಾನ ನಿರ್ಲಕ್ಷಗೊಳಗಾಗುತ್ತಿದೆ.

ಹಿಂದೆ ಕೀಟ ನಿಯಂತ್ರಣಕ್ಕಾಗಿ ಮತ್ತು ಫಲವತ್ತತೆಗಾಗಿ ವಿಷಕಾರಿ ಎಂಡೋ ಸಲ್ಫಾನ್ ಬದಲು ಬೇವಿನ ಎಣ್ಣೆ, ಯೂರಿಯಾ ರಸಗೊಬ್ಬರ ಬದಲಾಗಿ ಸೆಗಣಿ, ಮತ್ತು ಕೃಷಿ ತ್ಯಾಜ್ಯ ವಸ್ತುಗಳಿಂದ ಜೈವಿಕಗೊಬ್ಬರ ಬಳಸುತ್ತಿದ್ದರು. ಇದರಿಂದ ಬೆಳೆಗಳ ಪೋಷಣೆ ಮತ್ತು ಭೂಮಿಯ ಫಲವತ್ತತೆಯ ದೃಷ್ಟಿಯಿಂದ ಉತ್ತಮವಾಗಿತ್ತು.

೧. ಚರಗ ಚೆಲ್ಲುವುದರಿಂದ ಅನ್ನದ ಅಗಳು ತಿನ್ನಲು ಬರುವ ಪಕ್ಷಿಗಳು ಧನ್ಯಗಳಿಗೆ ಬಿದ್ದಿದ್ದ ಅಂದಿನ ಕ್ರಿಮಿಕೀಟಗಳನ್ನು ತಿನ್ನುತ್ತಿದ್ದವು.
೨. ದೇಪೋಳಿಗೆ, ದೀಪಾವಳಿ ಸಂದರ್ಭದಲ್ಲಿ ಆಚರಿಸುವ ಆಚರಣೆ ಗದ್ದೆಗೆ ಹೋಗಿ ದೀಪ ಹಚ್ಚಿ ಬರುತ್ತಿದ್ದರು. ಕೊಯ್ಯಲಿಗೆ ಬಂದಿರುವ ಸಂದರ್ಭವಾದ್ದರಿಂದ ಬೆಳೆಗೆ ಹಾನಿಗೊಳಿಸುವ ಕೀಟಗಳು ದೀಪದ ಆಕರ್ಷಣೆಯಿಂದ ಹಣತೆಯಲ್ಲಿನ ಎಣ್ಣೆಗೆ ಬಿದ್ದು ಸಾಯುತ್ತವೆ. ಇದರಿಂದ ಕೀಟದಿಂದ ಬೆಳೆ ರಕ್ಷಿಸುವ ಕ್ರಮವಾಗಿತ್ತು.
೩. ಹಲಸಂದೆ ಮುಂತಾದ ಬೆಳೆಗಳಿಗೆ ಕಂಬಳಿ ಹುಳು ಬಿದ್ದರೆ ಹೊಲದ ಸುತ್ತ ಹಚ್ಚ ಹಸಿರಿನ ಹುಲ್ಲು, ಸೊಪ್ಪು ಹಾಕುತ್ತಿದ್ದರು. ಹಸಿರು ಬಣ್ಣಕ್ಕೆ ಆಕರ್ಷಿತವಾದ ಹುಳುಗಳು ಅಲ್ಲಿಗೆ ಬಂದು ಅವು ಅಲ್ಲೇ ಸಾಯುತ್ತಿದ್ದವು. ಇಲ್ಲವೇ ಹುಲ್ಲು, ಸೊಪ್ಪುತಿಂದು ಅಲ್ಲೆ ಗೂಡುಕಟ್ಟಿ ಚಿಟ್ಟೆಗಳಾಗಿ ಹಾರಿ ಹೊಗುತ್ತಿದ್ದವು. (ಸಂ. ಎಂ.ಜಿ ಈಶ್ವರಪ್ಪ. ೧೯೯೯. ಪು.೭೫) ಈ ರೀತಿ ನಮ್ಮ ಪಾರಂಪರಿಕ ಕೃಷಿ, ನಮ್ಮ ಪೂರ್ವಿಕರ ಅನುಭವದ ಹಿನ್ನಲೆಯಲ್ಲಿ ಕೃಷಿ ಅಳವಡಿಸಿದ ರೀತಿ ವಿದಾನ ಮತ್ತು ಅಪಾಯಕಾರಿಯಲ್ಲದವು ಕಡಿಮೆ ಖರ್ಚಿನಲ್ಲಿ ಸುಲಭವಾಗಿ ನಿವಾರಿಸಬಹುದಾದ ವಿಧಾನ ಇಂದು ಆಧುನಿಕ ಕೃಷಿಯ ವ್ಯಾಮೋಹಕ್ಕೆ ಸಿಲುಕಿ ಪಾರಂಪರಿಕವಾದ ಕೃಷಿ ಪದ್ಧತಿ ನಿರ್ಲಕ್ಷ್ಯಕ್ಕೊಳಗಾಗುತ್ತಿದೆ.
೪. ಕೃಷಿಯೊಟ್ಟಿಗಿನ ಒಡನಾಟ ಮತ್ತು ಸಾಂಸ್ಕೃತಿಕ ಸಂಬಂಧ ದೂರವಾಗುತ್ತಿದೆ. ಅಂದುರೈತ ಬೆಳೆ ಬೆಳೆಯುವುದಕ್ಕೆ ಸಹಾಯವಾಗಿದ್ದ ಭೂಮಿಯ ಬಗ್ಗೆ, ಮಳೆಯ ಬಗ್ಗೆ, ತಮ್ಮೊಂದಿಗೆ ಹೆಗಲು ಕೊಟ್ಟು ದುಡಿಯುವ ಎತ್ತುಗಳ ಬಗೆಗೆ ಮತ್ತು ಕೃಷಿಗೆ ಬಳಸುತ್ತಿದ್ದ ಸಾಧನ ಸಲಕರಣೆಗಳ ಬಗ್ಗೆ ದೈವದ ಭಾವನೆ ಇತ್ತು. ಅವು ಶ್ರೇಷ್ಠವೆಂದು ಭಾವಿಸಿ ಕೆಲವು ನಂಬಿಕೆ ಮತ್ತು ಆಚರಣೆಗಳನ್ನು ನಡೆಸುತ್ತಿದ್ದರು. ಹಾಗೂ ಪೂಜ್ಯ ಭಾವನೆ ಕಾಣುತ್ತಿದ್ದರು. ಆದರೆ ಇಂದು ಕೃಷಿ ಒಂದು ವ್ಯವಹಾರಿಕವಾದ್ದರಿಂಧ ಬಿತ್ತಿಬೆಳೆಯುವ ಕ್ರಮ ಮಾತ್ರ ಹಾಗೆ ಉಳಿದಿದೆ. ಕೃಷಿ ವಲಯದಲ್ಲಿದ್ದ ಭೂಮಿ, ದೈವ, ಪ್ರಾಣಿ, ಮತ್ತು ಪ್ರಕೃತಿಗೆ ಸಂಬಂಧಿಸಿದಂತೆ ನಡೆಯುವ ಕೆಲವು ಆಚರಣೆ ಹಿಂದಿನಂತೆ ಸಂಭ್ರಮದಿಂದ ನಡೆಯದಿದ್ದರೂ ಸಾಂಪ್ರದಾಯಿಕವಾಗಿ ಉಳಿದುಕೊಂಡು ಬಂದಿದೆ. ರೈತರಿಗೆ ಭೂಮಿ ಮತ್ತು ಪ್ರಾಣಿಗಳ ಜೊತೆಗಿನ ಅವಿನಾಭಾವ ಸಂಬಂಧ ಸ್ವಲ್ಪಕಡಿಮೆಯಾಗಿವೆ.

ಅನ್ನದಾತ ಕೃಷಿಕರು ಕೃಷಿಗಾಗಿ ಗ್ರಾಮೀಣ ಪರಿಸರದ ವಿವಿಧ ಜಾತಿಯ ಜನರು, ಮತ್ತು ವೃತ್ತಿ ಪರಿಣತಿ ಹೊಂದಿದ ಜನರುಗಳ ಅನ್ಯೋನ್ಯ ಸಂಬಂಧವನ್ನು ಇಟ್ಟುಕೊಂಡಿದ್ದರು. ಒಬ್ಬರಿಗೊಬ್ಬರು ನೆರವಾಗುತ್ತಿದ್ದರು. ಹಾಗೆಯೇ ಅನ್ನದಾತರಾದ ಕೃಷಿಕರಿಗೆ ಬಡಿಗ, ಚಮ್ಮಾರ, ಕಮ್ಮಾರ, ಮುಂತಾದ ಜನರ ಅವಲಂಬನೆ ಇತ್ತು. ಇವರ ಹತ್ತಿರ ಕೃಷಿಗೆ ಪೂರಕವಾದ ಕುರ್ಗಿ (ಕೂರ್ಗೆ), ನೇಗಿಲು, ರಂಟೆ, ಕುಂಟೆ– ಇತ್ಯಾದಿ ವಸ್ತುಗಳನ್ನು ತೆಗೆದುಕೊಂಡು ಸುಗ್ಗಿಯ ಕಾಲದಲ್ಲಿ ತಾವು ಬೆಳೆದ ಬೆಳೆಗಳ ಇಂತಿಷ್ಟು ಪಾಲು ಅವರಿಗೆ ಕೊಡುತ್ತಿದ್ದರು.

ಅಲ್ಲದೆ ಊರಿನ ಹಿತಕ್ಕಾಗಿ ಮತ್ತು ಮನೆಯಲ್ಲಿ ನಡೆಯುವ ಶುಭಕಾರ್ಯ ಇಲ್ಲವೆ ಸತ್ತ ಕಾರ್ಯದಲ್ಲಿ ಭಾಗಿಯಾಗುತ್ತಿದ್ದ ಸಮಗಾರ, ಪೂಜಾರಿ, ಅಗಸ, ಚಲುವಾದಿ, ತಳವಾರರಿಗೂ ಕೂಡ ರೈತರು ಬೆಳೆಯಲ್ಲಿ ಪಾಲು ಕೊಡುತ್ತಿದ್ದರು. ಆದರೆ ಇಂದು ಕೃಷಿ ವ್ಯವಹಾರಿಕ ಮತ್ತು ಲಾಭದ ದೃಷ್ಟಿಯಿಂದ ತಾನು ಬೆಳೆದ ಬೆಳೆಯನ್ನು ಹಂಚಿ ತಿನ್ನುವ ಮನೋಭಾವ ದೂರವಾಗಿ ಕೃಷಿಯಲ್ಲಿ ಪಾಲು ಕೊಡುವ ಪದ್ಧತಿ ಕಡಿಮೆಯಾಗಿದೆ. ಕೃಷಿಕ ತನ್ನ ಮತ್ತು ಕುಟಂಬದ ಹಿತಾಸಕ್ತಿಯ ಬಗ್ಗೆ ಆಲೋಚಿಸುವ ಸಂಕುಚಿತತೆ ಬೆಳೆಸಿ ಕೊಂಡಿರುವರು. ಕೃಷಿಕರಿಗೆ ಮೊದಲಿದ್ದ ಊರೊಟ್ಟಿಗಿನ ಸಂಬಂಧ ದೂರವಾಗುತ್ತದೆ.

ಭೂಮಿಯ ಬಗ್ಗೆ ಕೃಷಿಕರಿಗಿದ್ದ ದೈವತ್ವ ಮತ್ತು ಭಕ್ತಿಯನ್ನು ಈ ಜನಪದಗೀತೆ ಈ ರೀತಿ ಪ್ರತಿಬಿಂಬಿಸುತ್ತದೆ.

ಬೆಳೆಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯಿ.
ನಾನೆದ್ದು ಗಳಿಗೆ ನೆನೆದೇನ.

ಈ ರೀತಿ ಇದ್ದ ಭಾವನೆ ಇಂದು ಹೋಗಿ, ಭೂಮಿಯ ಒಡಲನ್ನು ಸೀಳಿ ಗಣಿಗಾರಿಕೆ ನಡೆಸುತ್ತಿರುವ ಹಪಾಹಪಿತನವನ್ನು ನೋಡಿದರೆ ಭೂಮಿಯ ಮೇಲೆ ನಡೆಯುತ್ತಿರುವ ಅತ್ಯಾಚಾರ ಎಂಬ ಭಾವನೆ ಉಂಟಾಗುತ್ತದೆ.

ಹಿಂದಿನ ಕೃಷಿ ವ್ಯವಸ್ಥೆಯಲ್ಲಿದ್ದ ಎಷ್ಟೋ ಭೌತಿಕ, ಭಾವನಾತ್ಮಕ ಮತ್ತು ಸಾಂಸ್ಕೃತಿಕವಾದ ಅಂಶಗಳು ಕಳೆದು ಹೋಗುತ್ತಿವೆ. ಆದರೆ ಆಧುನಿಕತೆಯ ಸಹಜ ಪ್ರಕ್ರಿಯೆ ಬದುಕಿನ ಎಲ್ಲಾ ಮಗ್ಗಲುಗಳನ್ನು

ವ್ಯಾಪಿಸಿಕೊಂಡಿದೆ. ಹಾಗಾಗಿ ಅದನ್ನು ತಡೆಯಲು ನಿಲ್ಲಿಸಲಾಗದು. ಆದರೆ ಯಾವುದು ಸ್ವೀಕರಿಸಬೇಕು ಮತ್ತು ಯಾವುದನ್ನು ನಿರಾಕರಿಸಬೇಕು ಎನ್ನುವ ಸೂಕ್ಷ್ಮ ಎಚ್ಚರ ನಮಗೆ ಬೇಕಾಗುತ್ತದೆ. ಹೆಚ್ಚು ಉತ್ಪಾದಿಸಬೇಕೆಂಬ ಹಂಬಲದಿಂದ ಆಧುನಿಕ ಕೃಷಿ ವಿಧಾನ ವ್ಯಾಮೋಹಕ್ಕೆ ಒಳಗಾದರೆ ಕೊನೆಗೆ ತನ್ನ ತನವನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಬಂದೊದಗುತ್ತದೆ ಎಂಬುದು ಮಾತ್ರ ಸತ್ಯ.

**ಪರಾಮರ್ಶನ ಕೃತಿಗಳು**


1. ನೆಲದವರು – ಕೃಷಿ – ನರೇಂದ್ರ ರೈ ದೇರ್ಲ
2. ಸಹಜ ಕೃಷಿ – ಕೆ.ಪಿ.ಪೂರ್ಣಚಂದ್ರ ತೇಜಸ್ವಿ
3. ಸಾವಯವ ಕೃಷಿ – ನರೇಂದ್ರ ರೈ ದೇರ್ಲ
4. ಕೃಷಿ ಜಾನಪದ – ಡಾ. ಎಂ.ಜಿ ಈಶ್ವರಪ್ಪ
5. ಒಂದು ಹುಲ್ಲಿನ ಕ್ರಾಂತಿ – ಮಸನೊಬು ಫುಕುವೊಕ (ಅನುವಾದ – ಸಂತೋಷ ಕೌಲಗಿ)
6. ಕೃಷಿ : ಪಾರಂಪರಿಕ ಜ್ಞಾನ – ಸಂ. ಸ.ಚಿ ರಮೇಶ್
7. ಜಾನಪದ ಸಾಹಿತ್ಯ ಮತ್ತು ವರ್ತಮಾನ – ಸಂ. ಮಾದೇಶ್.ಎನ್